# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**No. ಬಿ19/345/85-86**
**Encl :**

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.
ದಿನಾಂಕ:-
24 JUN 2013

## ಸುತ್ತೋಲೆ

ವಿಷಯ:- ರಾಜ್ಯದ ಗ್ರಾಮೀಣ ಪ್ರದೇಶಗಳಿಗೆ ಹಗಲಿನ ವೇಳೆಯಲ್ಲಿ 4 ಗಂಟೆಗಳ 3 ಫೇಸ್ ವಿದ್ಯುತ್ ಮತ್ತು ರಾತ್ರಿ ವೇಳೆಯಲ್ಲಿ 2 ಗಂಟೆಗಳ 3 ಫೇಸ್ ವಿದ್ಯುತ್ತನ್ನು ವ್ಯವಸ್ಥಿತವಾಗಿ ಸರಬರಾಜು ಮಾಡುವ ಬಗ್ಗೆ.

ಉಲ್ಲೇಖ:- ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಎನ್ 28 ವಿಎಸ್‌ಸಿ 2013 ಬೆಂಗಳೂರು ದಿನಾಂಕ 31.05.2013

*********

ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 27.05.2013 ಮತ್ತು 28.05.2013 ರಂದು ಜರುಗಿದ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ, ಮಾನ್ಯ ಮುಖ್ಯ ಮಂತ್ರಿಗಳು, ಗ್ರಾಮೀಣ ಪ್ರದೇಶಗಳಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜಾಗುತ್ತಿರುವ ಕುರಿತು ಪ್ರಸ್ತಾಪಿಸಿ, ಗ್ರಾಮೀಣ ಪ್ರದೇಶದಲ್ಲಿನ ನೀರಾವರಿ ಪಂಪ್ ಸೆಟ್ ಮತ್ತು ಕುಡಿಯುವ ನೀರಿನ ಸ್ಥಾವರಗಳಿಗೆ ಅಡಚಣೆ ಉಂಟಾಗದಂತೆ ವ್ಯವಸ್ಥಿತವಾಗಿ ಹಗಲಿನ ವೇಳೆಯಲ್ಲಿ 4 ಗಂಟೆಗಳ 3 ಫೇಸ್ ವಿದ್ಯುತ್ ಮತ್ತು ರಾತ್ರಿ ವೇಳೆಯಲ್ಲಿ 2 ಗಂಟೆಗಳ 3 ಫೇಸ್ ವಿದ್ಯುತನ್ನು ಪೂರೈಸಲು ನಿರ್ದೇಶಿಸಿ, ಈ ಕುರಿತು ಆದೇಶವನ್ನು ಸರ್ಕಾರವು 31.05.2013 ರಂದು ಹೊರಡಿಸಿದೆ. ಈ ಆದೇಶದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ಪ್ರ.ನಿ.ನಿ ಹಾಗೂ ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಸರಬರಾಜು ಕಂಪನಿಗಳು ರವರಿಗೆ ಸದರಿ ಕಾರ್ಯಕ್ರಮವನ್ನು ಜಾರಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದಕ್ಕಾಗಿ ನಿರ್ದೇಶನ ನೀಡಲಾಗಿದೆ.

ನಿಗಮದ ಅಧಿಕಾರಿಗಳು ಸೂಕ್ತ ಮುಂಜಾಗೃತಾ ವ್ಯವಸ್ಥೆಗಳನ್ನು ಏರ್ಪಾಡುಮಾಡಿಕೊಳ್ಳುವುದರೊಂದಿಗೆ ಸಂಬಂಧಿಸಿದ ಎಲ್ಲಾ ಸರಬರಾಜು ಕಂಪನಿಗಳೊಂದಿಗೆ ಸಮನ್ವಯವನ್ನು ಸಾಧಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ಮುಂದುವರೆದು, ಸದರಿ ವಿಷಯದಲ್ಲಿ ಮುಂಬರುವ ದಿನಗಳಲ್ಲಿ ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶಗಳನ್ನೂ ಸಹ ಪಾಲಿಸಲು ಕೋರಲಾಗಿದೆ.

B. Shekar 24.06.13
ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕ.ವಿ.ಪ್ರ.ನಿ.ನಿ

ಪ್ರತಿಗಳು:-

ಮುಖ್ಯ ಇಂಜಿನಿಯರ್ (ವಿ),ಪ್ರಸರಣ ವಲಯ, ಕ.ವಿ.ಪ್ರ.ನಿ.ನಿ, ಬೆಂಗಳೂರು/ತುಮಕೂರು/ಹಾಸನ/ಮೈಸೂರು/ಬಾಗಲಕೋಟೆ/ಗುಲ್ಬರ್ಗ-ತಮ್ಮ ವಲಯದ ವ್ಯಾಪ್ತಿಯಲ್ಲಿ ಬರುವ ಅಧಿಕಾರಿವರ್ಗದವರಿಗೆ ಕಾರ್ಯಕ್ರಮವನ್ನು ಜಾರಿಗೊಳಿಸಲು ಸೂಕ್ತ ಮಾರ್ಗದರ್ಶನ ನೀಡಲು ಕೋರಲಾಗಿದೆ.

ಅಧೀಕ್ಷಕ ಇಂಜಿನಿಯರ್ (ವಿ) (ಐ ಮತ್ತು ಟಿ), ಕ.ವಿ.ಪ್ರ.ನಿ.ನಿ, ಕಾವೇರಿ ಭವನ, ಬೆಂಗಳೂರು-ಸುತ್ತೋಲೆಯನ್ನು ಕ.ವಿ.ಪ್ರ.ನಿ.ನಿ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ತಾಂತ್ರಿಕ) ನಿರ್ದೇಶಕರು(ಹಣಕಾಸು)/ ನಿರ್ದೇಶಕರು(ಆಮತ್ತುಸಂ)/ ನಿರ್ದೇಶಕರು (ನಿ ವ್ಯ ಮತ್ತು ಕಾರ್ಯದರ್ಶಿ)ರವರ ಆಪ್ತ ಕಾರ್ಯದರ್ಶಿಗಳು- ನಿರ್ದೇಶಕರುಗಳ ದಯಾಪರ ಗಮನಕ್ಕೆ ತರಲು.

CE(T) 24/6/13 ACE-1, upload, AO 24/6